# ಅಪರ ಜಿಲ್ಲಾ ಹಾಗೂ ಸತ್ರ ನ್ಯಾಯಾಲಯ, ಗದಗ

## ಎಸ್ ಸಿ ನಂ.95/2024

ಸಿಡಬ್ಲ್ಯೂ3/ಪಿಡಬ್ಲ್ಯೂ 5
ದಿನಾಂಕಃ 29.08.2025

**ಪ್ರಮಾಣ ವಚನ ಭೋಧಿಸಲಾಯಿತು.**

| | |
|---|---|
| ಸಾಕ್ಷಿದಾರನ/ಳ ಹೆಸರು | - ಶ್ರೀ ಜಗದೀಶ ದೊಡ್ಡಮನಿ |
| ತಂದೆಯ ಹೆಸರು | - ಶ್ರೀ ಸೋಮಸಿಂಗ |
| ವಯಸ್ಸು | - 45 ವರ್ಷ |
| ಉದ್ಯೋಗ | - ವ್ಯವಸಾಯ |
| ವಾಸಸ್ಥಳ | - ಅಕ್ಕಿಗುಂದ ತಾಃಲಕ್ಷ್ಮೇಶ್ವರ |

## ಮುಖ್ಯ ವಿಚಾರಣೆಃ ವಿಶೇಷ ಸರ್ಕಾರಿ ಅಭಿಯೋಜಕರಿಂದ

1. ಸುಮಾರು 3-4 ತಿಂಗಳ ಹಿಂದೆ ಪೊಲೀಸರು ನಮ್ಮ ಊರಿಗೆ ಬಂದಿದ್ದರು. ನಾನು ಹೊಲಕ್ಕೆ ಹೋಗುವ ಸಮಯದಲ್ಲಿ ಪೊಲೀಸರು ನನ್ನನ್ನು ಕರೆದ ನಿಲ್ಲಿಸಿ ಪೋಟೊ ತೆಗೆದುಕೊಂಡರು. ಆ ಸಮಯದಲ್ಲಿ ಅಸಾಃ4 ರವರೂ ಹಾಜರಿದ್ದರು. ಇದನ್ನು ಹೊರತುಪಡಿಸಿ ನನಗೆ ಬೇರ ಸಂಗತಿಗಳು ಗೊತ್ತಿರುವುದಿಲ್ಲ. ನಾನು ನನ್ನ ಪೋಟೊ ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ತಾನು ಇರುವ ಎರಡು ಭಾವಚಿತ್ರಗಳನ್ನು ನೋಡಿ ಗುರುತಿಸಿರುತ್ತಾರೆ ಅವುಗಳನ್ನು ಈಗಾಗಲೇ ಒಟ್ಟಾರೆಯಾಗಿ ನಿಪಿಃ 3 ಎಂದು ಗುರುತಿಸಲಾಗಿವೆ.

2. ನಾನು ನನ್ನ ಸಹಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನಿಪಿಃ2 ರ ಮೇಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಆ ಕಾರಣ ಅದನ್ನು **ನಿಪಿಃ2(ಸಿ)** ಎಂದು ಗುರುತಿಸಲಾಯಿತು.

**(ಸರ್ಕಾರಿ ಅಭಿಯೋಜಕರು ಸಾಕ್ಷಿದಾರರು ಪಂಚನಾಮೆಗೆ ವಿರುದ್ಧವಾಗಿ ಸಾಕ್ಷ್ಯ ನುಡಿದಿದ್ದು, ಎದುರುಗಾರರು ಪಾಟೀ ಸವಾಲಿನಲ್ಲಿ ಕೇಳುವ ಪ್ರಶ್ನೆಗಳನ್ನು ಸಾಕ್ಷಿಗೆ ಕೇಳಲು ಅನುಮತಿಸಬೇಕೆಂದು ಮನವಿ ಮಾಡಿರುತ್ತಾರೆ. ಸಾಕ್ಷಿಯ ಪಂಚನಾಮೆ ಹಾಗೂ ಮುಖ್ಯ ವಿಚಾರಣೆಯನ್ನು ಪರಿಶೀಲಿಸಿದಾಗ, ಸಾಕ್ಷಿಯು ಪಂಚನಾಮೆಗೆ ವಿರುದ್ಧವಾಗಿ ಸಾಕ್ಷ್ಯ ನುಡಿದಿದ್ದು,**

**ಸರ್ಕಾರಿ ಅಭಿಯೋಜಕರಿಗೆ BNSS Sec**.181 **and BSA Sec**.157 **ರಡಿಯಲ್ಲಿ ಎದುರುದಾರರು ಪಾಟೀ ಸವಾಲಿನಲ್ಲಿ ಕೇಳಬಹುದಾದ ಪ್ರಶ್ನೆಗಳನ್ನು ಕೇಳಲು ಸರ್ಕಾರಿ ಅಭಿಯೋಜಕರಿಗೆ ಅನುಮತಿಸಲಾಯಿತು**).

**ಪಾಟೀ ಸವಾಲು ವಿಶೇಷ ಸರ್ಕಾರಿ ಅಭಿಯೋಜಕರಿಂದ**

3. ಪೊಲೀಸರು ದಿಃ12.02.2024 ರಂದು ಮಧ್ಯಾಹ್ನ 1.00 ಘಂಟೆಯ ಸಮಯಕ್ಕೆ ಸ್ಥಳಕ್ಕೆ ಬಂದಿದ್ದರು ಎಂದರೆ ಸರಿಯಲ್ಲ. ಸದರಿ ಸ್ಥಳದಲ್ಲಿ ನನ್ನ ಸಮಕ್ಷಮ ಮಧ್ಯಾಹ್ನ 1 ರಿಂದ 2 ಘಂಟೆಯವರೆಗೆ ನಿಪಿಃ2 ರಂತೆ ಪಂಚನಾಮೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಪಂಚನಾಮೆ ಸಮಯದಲ್ಲಿ ಮು ಮಾ 1 ನ್ನು ಅಮಾನತ್ತುಪಡಿಸಿಕೊಂಡರು ಎಂದರೆ ಸರಿಯಲ್ಲ. ಸದರಿ ಪಂಚನಾಮೆ ಮಾಡಲು ಅಸಾಃ1 ಶ್ರೀ ನಾಮದೇವ ಮಾಂಡ್ರೆರವರು ಸ್ಥಳ ತೋರಿಸಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ನಿಪಿಃ2 ನ್ನು ಬರೆದು ಮು ಮಾ 1 ನ್ನು ಅಮಾನತ್ತುಪಡಿಸಿಕೊಂಡಿದ್ದರೂ ಸಹ ಆರೋಪಿ ನಮ್ಮ ಊರಿನವನಾಗಿರುವ ಕಾರಣ ಆತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಆರೋಪಿ ಪರ ಶ್ರೀ ಡಿ ಎಚ್ ಲಮಾಣಿ ವಕೀಲರಿಂದಃ**

ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ತಿಳಿಸಿದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೆ ಸರಿ ಇದೆ.

ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಗದಗ.